ಕುಣಿಗಲ್ ತಾಲ್ಲೂಕೂ ಸೇರಿದಂತೆ ಕಾವೇರಿ ನದಿ ಪಾತ್ರದಲ್ಲಿ ಬರುವ ಯಾವ ತಾಲ್ಲೂಕನ್ನೂ ಸೇರಿಸಿಲ್ಲ. ಇದರಿಂದಾಗಿ ಕುಣಿಗಲ್ ತಾಲ್ಲೂಕಿನಲ್ಲಿ ಜಲ ಸಂವರ್ಧನಾ ಯೋಜನೆಯ ಕಾರ್ಯಕ್ರಮ ಹಮ್ಮಿಕೊಳ್ಳಲು ಸಾಧ್ಯವಾಗಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

244 (801) – ಶ್ರೀ ಪಾಟೀಲ್ ಡಿ.ಆರ್. (ಗದಗ್) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಬೊಕ್ಕಸಕ್ಕೆ ಬರುವ ಆದಾಯದ ಮೂಲಗಳು ಯಾವುವು ;

ಆ) ಕಳೆದ ಮೂರು ವರ್ಷಗಳಲ್ಲಿ ಆದಾಯದ ಮೂಲಗಳಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು ; (ವರ್ಷಾವಾರು ಆದಾಯದ ಮೂಲವಾರು ವಿವರ ನೀಡುವುದು) ;

ಇ) ಸರ್ಕಾರದ ಒಟ್ಟು ಆದಾಯದಲ್ಲಿ ಬರಪೀಡಿತ ಪ್ರದೇಶದ ಅಭಿವೃದ್ಧಿಗಾಗಿ ಸರ್ಕಾರ ಮಾಡಿದ ವೆಚ್ಚವೆಷ್ಟು ; (ಕಳೆದ ಮೂರು ವರ್ಷದ ವರ್ಷಾವಾರು ವಿವರ ನೀಡುವುದು) ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)–

ಅ) ರಾಜ್ಯ ಸರ್ಕಾರವು ಈ ಕೆಳಕಂಡ ತೆರಿಗೆಗಳಿಂದ ಆದಾಯವನ್ನು ಸಂಗ್ರಹಿಸುತ್ತದೆ:

1. ವಾಣಿಜ್ಯ ತೆರಿಗೆ
2. ಅಬಕಾರಿ ತೆರಿಗೆ
3. ವಾಹನಗಳ ಮೇಲಿನ ತೆರಿಗೆ
4. ಮುದ್ರಾಂಕ ಮತ್ತು ನೋಂದಣಿ ಶುಲ್ಕ
5. ಭೂಕಂದಾಯ
6. ವಿದ್ಯುಚ್ಛಕ್ತಿ ಮೇಲಿನ ತೆರಿಗೆ ಮತ್ತು ಶುಲ್ಕ
7. ಇತರೆ ತೆರಿಗೆ ಮತ್ತು ಶುಲ್ಕ
8. ಕೇಂದ್ರದಿಂದ ಹಂಚಿಕೆಯಾಗುವ ತೆರಿಗೆ ಮತ್ತು ಶುಲ್ಕ
9. ಕೇಂದ್ರದಿಂದ ಸಹಾಯಾನುದಾನ

ಆ) ಕಳೆದ ಮೂರು ವರ್ಷಗಳಲ್ಲಿ ಆದಾಯದ ಮೂಲಗಳಿಂದ ಸರ್ಕಾರಕ್ಕೆ ಬಂದ ಆದಾಯದ ವಿವರ ಈ ಕೆಳಕಂಡಂತಿದೆ:

(ರೂ. ಕೋಟಿಗಳಲ್ಲಿ)

ಇಲಾಖೆಗಳು	2002-03	2003-04	2004-05
	ಲೆಕ್ಕ ಗ್ರಹಿಸಿದ (ಪ್ರಾ ಸಂಗ್ರಹಣೆ)	ಲೆಕ್ಕ ಗ್ರಹಿಸಿದ (ಪ್ರಾ ಸಂಗ್ರಹಣೆ)	ಲೆಕ್ಕ ಗ್ರಹಿಸಿದ (ಪ್ರಾ ಸಂಗ್ರಹಣೆ)
1. ವಾಣಿಜ್ಯ ತೆರಿಗೆ	6313.24	7733.22	10057.19
2. ಅಬಕಾರಿ ತೆರಿಗೆ	2094.18	2333.96	2805.53
3. ವಾಹನಗಳ ಮೇಲಿನ ತೆರಿಗೆ	675.70	800.06	983.00
4. ಮುದ್ರಾಂಕ ಮತ್ತು ನೋಂದಣಿ ಶುಲ್ಕ	1115.34	1355.69	1759.84
5. ಭೂಕಂದಾಯ	59.61	67.84	117.76
6. ವಿದ್ಯುಚ್ಛಕ್ತಿ ಮೇಲಿನ ತೆರಿಗೆ ಮತ್ತು ಶುಲ್ಕ	172.13	272.92	339.02
7. ಇತರೆ ತೆರಿಗೆ ಮತ್ತು ಶುಲ್ಕ	9.50	6.43	9.99
8. ಕೇಂದ್ರದಿಂದ ಹಂಚಿಕೆಯಾಗುವ ತೆರಿಗೆ ಮತ್ತು ಶುಲ್ಕ	2786.20	3244.81	3878.44
9. ಕೇಂದ್ರದಿಂದ ಸಹಾಯಾನುದಾನ	1665.18	1986.57	2146.56
ಒಟ್ಟು	14891.08	17801.50	22097.33

ಇ) ಕಳೆದ ಮೂರು ವರ್ಷಗಳಲ್ಲಿ ಬರಪೀಡಿತ ಪ್ರದೇಶಗಳ ಅಭಿವೃದ್ಧಿಗಾಗಿ ಸರ್ಕಾರವು ಮಾಡಿರುವ ವೆಚ್ಚ ಈ ಕೆಳಕಂಡಂತಿದೆ:

(ರೂ. ಕೋಟಿಗಳಲ್ಲಿ)

2002–03	192.21
2003–04	363.63
2004–05	240.20
ಒಟ್ಟು	796.04